ದಿನಾಂಕ 20-02-2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು ಃ ಶ್ರೀ ಬಿ.ಜೆ.ಆರ್. ವಕೀಲರಿಂದಃ**

ಚಿಕ್ಕದಾಸಪ್ಪನಿಗೆ ನಾನು ನೋಡಿಲ್ಲ. ಚಿಕ್ಕದಾಸಪ್ಪನಿಗೆ ೫ ಜನ ಮಕ್ಕಳು ಎಂದರೆ ನಿಜ. ಈರಮರಿಯಪ್ಪ, ಕದರಣ್ಣ ಇವರಿಗೂ ನನಗೂ ಸುಮಾರು ೩೦ ವರ್ಷಕ್ಕೂ ಹೆಚ್ಚು ಹಿರಿಯರು. ಚಿಕ್ಕದಾಸಪ್ಪ ಮೃತಪಟ್ಟ ಬಳಿಕ ಅವರ ಕುಟುಂಬದ ವ್ಯವಹಾರವನ್ನು ಈರಮರಿಯಪ್ಪ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಚಿಕ್ಕದಾಸಪ್ಪನ ಯಾವ ಮಗ ಕುಟುಂಬದ ವ್ಯವಹಾರ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ಚಿಕ್ಕದಾಸಪ್ಪನ ಮಕ್ಕಳ ಕುಟುಂಬದ ವ್ಯವಹಾರದ ಪೂರ್ಣ ಮಾಹಿತಿ ನನಗೆ ಗೊತ್ತಿಲ್ಲ. ಚಿಕ್ಕದಾಸಪ್ಪನ ಮಕ್ಕಳ ಕುಟುಂಬಕ್ಕೆ ೬ ಆಸ್ತಿಗಳು ಇದ್ದವು. ಸುಮಾರು ೪೫ ವರ್ಷಗಳ ಹಿಂದೆ ಆ ರೀತಿ ಅವರಿಗೆ ೬ ಆಸ್ತಿಗಳು ಇದ್ದವು. ಅವು ದಾವಾ ಐಟಂ ನಂ ೩ ರಿಂದ ೮ ಆಗಿವೆ. ದಾವಾ ಐಟಂ ನಂ ೮ ರಿಂದ ೧೦ ಸಹ ಅವರ ಕುಟುಂಬಕ್ಕೆ ಸೇರಿತ್ತು ಎಂದರೆ ನಿಜ. ಚಿಕ್ಕದಾಸಪ್ಪನ ೫ ಜನ ಮಕ್ಕಳು ಆ ಆಸ್ತಿಗಳು ಜಂಟಿ ಕುಟುಂಬದಲ್ಲಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ಸುಮಾರು ೪೫ ವರ್ಷಗಳ ಹಿಂದೆಯೇ ಬಾಯಿ ಮಾತಿನ ಮೂಲಕ ಭಾಗ ಆಗಿದ್ದರು. ನಂತರ ಓ.ಎಸ್. ನಂ ೩೪೮/೯೪ ರ ದಾವೆಯಲ್ಲಿ ಭಾಗ ಮಾಡಿಕೊಂಡರು ಎನ್ನುತ್ತಾರೆ. ಸುಮಾರು ೪೫ ವರ್ಷಗಳ ಹಿಂದೆ ಭಾಗ ಆಗಿದ್ದರು ಎಂದು ಹೇಳಿದ್ದು ಅ ಬಗ್ಗೆ ಪಂಚಾಯಿತಿ ಮಾಡಿದ್ದರೋ ಅಥವಾ ಇಲ್ಲವೋ ಗೊತ್ತಿಲ್ಲ. ಆ ಬಗ್ಗೆ ಪಹಣಿಗಳು ಇದ್ದವೋ ಇಲ್ಲವೋ ಗೊತ್ತಿಲ್ಲ. ೧೯೯೪ ರ ಮುಂಚಿತವಾಗಿ ಅವರ ಕುಟುಂಬದ ಆಸ್ತಿಗಳ ಪಹಣಿಗಳು ಜಂಟಿಯಾಗಿದ್ದವು ಎಂದರೆ ನಿಜ. ಓ.ಎಸ್. ನಂ ೩೪೮/೯೪ ರ ಬಗ್ಗೆ ನಾನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿದ್ದು, ಅದನ್ನು ದಾಖಲೆ ನೋಡಿ ಬರೆಸಿದ್ದೇನೆ. ಅ ದಾವೆಯಲ್ಲಿ ಭಾಗ ಆಗಿದ್ದ ದಿನ ನಾನು ಬಂದಿದ್ದೇ. ನಮ್ಮ ಕೇಸು ಆ ದಿನ ಇದ್ದ ಕಾರಣ ಬಂದಿದ್ದೇ. ಚಿಕ್ಕದಾಸಪ್ಪನ ಮಕ್ಕಳು ನನಗೆ ಆ ದಾವೆಯಲ್ಲಿ ರಾಜೀ ಮಾಡಿಕೊಳ್ಳಲು ಕರೆದಿರಲಿಲ್ಲ, ಆ ದಾವೆ ಡಿಕ್ರಿ ಆಗುವ ಮೊದಲು ಚಿಕ್ಕದಾಸಪ್ಪನ ಮಕ್ಕಳು ಕುಟುಂಬದ ಆಸ್ತಿಗಳು ಜಂಟಿಯಾಗಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ, ಅವರು ಭಾಗ ಆದಾಗ ನಾನು ಹಂಚಿಕೊಡಲು ಹೋಗಿರಲಿಲ್ಲ, ಮೇಲೆ ಹೇಳಿದ ದಾವೆಯು ನಿಂಗಮ್ಮ ಹಾಕಿದ್ದರು ಮತ್ತು ರಾಜೀ ಮಾಡಿಕೊಂಡಿದ್ದರು.

ಈ ಹಂತದಲ್ಲಿ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.